**CC 4604/2022 DW-1**

<u>ದಿನಾಂಕಃ **23.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

## <u>ಪಾಟೀ ಸವಾಲು ಪಿರ್ಯಾದುದಾರರ ಪರ ಶ್ರೀ. ಹೆಚ್ ಸಿ ಎಸ್ ವಕೀಲರಿಂದಃ-</u>

1. ಈ ಕೇಸಿನಲ್ಲಿ ಹಾಜರುಪಡಿಸಿರುವ ಚೆಕ್ ತಮ್ಮ ಬ್ಯಾಂಕ್ ಖಾತೆಗೆ ಸೇರಿದ್ದು ಎಂದರೆ ಸರಿ, ಆದರೆ ನಾನು ಸದರಿ ಚೆಕ್ ನ್ನು ಪಿರ್ಯಾದಿಗೆ ನೀಡಿಲ್ಲ ಎನ್ನುತ್ತಾರೆ. ನಿಪಿ-1ರಲ್ಲಿರುವ ಸಹಿ ತಮ್ಮದು ಎಂದರೆ ಸಾಕ್ಷಿ ನನ್ನದಲ್ಲ ಎನ್ನುತ್ತಾರೆ. ಈ ಕೇಸಿನ ಬಗ್ಗೆ ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಪಿರ್ಯಾದುದಾರರು ತಮಗೆ ಸೇರಿದ ಚೆಕ್ಕನ್ನು ತಮ್ಮ ಬ್ಯಾಂಕ್ ಖಾತೆಗೆ ಹಾಜರುಪಡಿಸಿದಾಗ ತಮ್ಮ ಬ್ಯಾಂಕಿನವರು ಏನು ಹಿಂಬರಹ ಕೊಟ್ಟಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಒಂದು ವೇಳೆ ನಾನು ನಿಪಿ-1 ಚೆಕ್ಕಿನಲ್ಲಿ ಸಹಿ ಮಾಡದೆ ಇದ್ದರೆ ಬ್ಯಾಂಕಿನ ಹಿಂಬರಹದಲ್ಲಿ Signature Differs ಎಂದು ಬರುತ್ತಿತ್ತು ಆದರೆ Funds Insufficient ಎಂದು ಬಂದಿದೆ ಎಂದರೆ ಸಾಕ್ಷಿ ಈ ಬಗ್ಗೆ ಗೊತ್ತಿಲ್ಲ ಆದರೆ ನಾನು ಚೆಕ್ಕನ್ನು ಪಿರ್ಯಾದುದಾರರಿಗೆ ಸಹಿ ಮಾಡಿ ಕೊಟ್ಟಿಲ್ಲ ಎನ್ನುತ್ತಾರೆ. ಬ್ಯಾಂಕ್ ನಲ್ಲಿ ಯಾವುದೇ ವ್ಯವಹಾರ ಆದರೆ ನನ್ನ ಖಾತೆಗೆ ಸಂಬಂಧಿಸಿದಂತೆ ನನ್ನ ಮೊಬೈಲಿಗೆ ಮೆಸೇಜ್ ಬರುತ್ತದೆ ಎಂದರೆ ಸರಿ. ನಿಪಿ-1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ನನ್ನ ಮೊಬೈಲ್ ಪೋನಿಗೆ ಮೆಸೇಜ್ ಬಂದಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ತಕ್ಷಣ ನಾನು ಬ್ಯಾಂಕಿಗೆ ಹೋಗಿ ವಿಚಾರಿಸಿದಾಗ ಯಾರೋ ನನ್ನ ಖಾತೆಗೆ ಸೇರಿದ ಚೆಕ್ಕನ್ನು ಹಾಜರುಪಡಿಸಿದ್ದಾರೆ ಆಗಾಗಿ ಮೆಸೇಜ್ ಬಂದಿದೆ ಎಂದು ಹೇಳಿದ್ದು ಆಗ ನಾನು ಬ್ಯಾಂಕಿಗೆ ದೂರು ಬರೆದುಕೊಟ್ಟಿರುತ್ತೇನೆ ಎನ್ನುತ್ತಾರೆ.

2. ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ ಆದರೆ ಹಾಜರುಪಡಿಸಿಲ್ಲ. ಯಾರು ತಮಗೆ ಸೇರಿದ ಚೆಕ್ಕನ್ನು ಹಾಜರುಪಡಿಸಿದ್ದಾರೆ ಎಂದು ತಾವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ನಿಪಿ-1 ಚೆಕ್ಕಿಗೆ ಸಂಬಂಧಿಸಿದಂತೆ ತಾವು ಖಾತೆ ಹೊಂದಿದ್ದ ಫೆಡರಲ್ ಬ್ಯಾಂಕ್ ಮ್ಯಾನೇಜರಿಗೆ ತಮ್ಮ ಚೆಕ್ ದುರುಪಯೋಗ ಆಗಿದೆ ಎಂದು ಪಿರ್ಯಾದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ತಾವು ತಮ್ಮ ಚೆಕ್ ಮಿಸ್ ಆದ ಬಗ್ಗೆ ಪೊಲೀಸ್ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪದ್ಮಾವತಿ ಕೋಂ ರಾಮಮೂರ್ತಿ ಎಂ, ದೊಡ್ಡಮಳೂರು ಗ್ರಾಮ ನನ್ನ ವಿಳಾಸ ಎಂದರೆ ಸರಿ. ಪಿರ್ಯಾದುದಾರರು ಕಳುಹಿಸಿ ನೋಟೀಸ್ ನನಗೆ ತಲುಪಿದೆ ಎಂದರೆ ಸಾಕ್ಷಿ ನನಗೆ ನೇರವಾಗಿ ಬಂದಿಲ್ಲ ನನ್ನ ಅತ್ತೆಗೆ ಬಂದು ಅವರು ಕೊಟ್ಟಿರುತ್ತಾರೆ ಎನ್ನುತ್ತಾರೆ. ಪಿರ್ಯಾದುದಾರರು ಕಳುಹಿಸಿದ ನೋಟೀಸ್ ಗೆ ಪ್ರತ್ಯುತ್ತರ ನೋಟೀಸ್ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಈ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಆಗಾಗಿ ಕೊಡಲಿಲ್ಲ ಎನ್ನುತ್ತಾರೆ.

3. ಪಿರ್ಯಾದುದಾರರಿಂದ ದಿನಾಂಕ 17.02.2021ರಂದು 4 ಲಕ್ಷ ಹಣವನ್ನು ಪಡೆದು 1 ವರ್ಷ 6 ತಿಂಗಳು ಬಿಟ್ಟು ಕೊಡುತ್ತೇನೆಂದು ಹೇಳಿದ್ದೆ ಎಂದರೆ ಸರಿಯಲ್ಲ. 1 ವರ್ಷ 6 ತಿಂಗಳು ಕಳೆದ ನಂತರ ಪಿರ್ಯಾದುದಾರರು ತಮ್ಮ ಬಳಿ ಬಂದು 4 ಲಕ್ಷ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದ್ದು ಆಗ ನಾನು ಈ ಕೇಸಿನ ಚೆಕ್ ನ್ನು 4 ಲಕ್ಷ ರೂಪಾಯಿಗೆ ಬರೆದು ಪಿರ್ಯಾದುದಾರರಿಗೆ ನೀಡಿದ್ದೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಂತೆ ಪಿರ್ಯಾದುದಾರರು ದಿ 01.09.2021ರಂದು ತಾವು ನೀಡಿದ ಚೆಕ್ಕನ್ನು ಹಣದ ನಗದೀಕರಣಕ್ಕಾಗಿ ಸಲ್ಲಿಸಿಕೊಂಡಾಗ ನನ್ನ ಬ್ಯಾಂಕ್ ಖಾತೆಯಲ್ಲಿ ಸದರಿ ಚೆಕ್ಕಿಗಾಗುವಷ್ಟು ಹಣ ಇಲ್ಲ ಎಂದು ವಾಪಸ್ಸು ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದು ಸಾಕ್ಷಿ ಮುಂದುವರೆದು ನಾನು ಆರೋಪಿಯಿಂದ ಹಣ ಪಡೆದಿಲ್ಲ ಎನ್ನುತ್ತಾರೆ. ತದನಂತರ ಪಿರ್ಯಾದುದಾರರು ಹಣವನ್ನು ವಾಪಸ್ಸು ಕೊಡಲು ಕೇಳಿದ್ದರು ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಕೊಡಬೇಕಾಗಿರುವ 4 ಲಕ್ಷ ಹಣವನ್ನು ಕೊಡುವುದನ್ನು ತಪ್ಪಿ ಸಿಕೊಳ್ಳಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ವಾಪಸ್ಸು ಕೊಡಬೇಕಾಗುತ್ತದೆ ಎಂದು ಪಿರ್ಯಾದುದಾರರು ಯಾರೆಂದು ನನಗೆ ಗೊತ್ತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ